ದೇವಿಯ ಆರಾಧನೆಯೊಂದಿಗೆ ಸ್ವರಗಳ ಆರಾಧನೆಗೂ ಮೈಸೂರು ದಸರಾ ಪ್ರಸಿದ್ಧ. ಸಂಗೀತ ಸಂಭ್ರಮವಿಲ್ಲದೆ ದಸರೆಯ ಸಂಭ್ರಮ ಪೂರ್ಣಗೊಳ್ಳುವುದಿಲ್ಲ. ಕರ್ನಾಟಕ ಹಾಗೂ ಹಿಂದೂಸ್ತಾನಿ ಸಂಗೀತಗಳೆರಡಕ್ಕೂ ವೇದಿಕೆಯಾಗಿದ್ದ ದಸರಾ ಆಚರಣೆ, ನಾಡು ಹಾಗೂ ಹೊರನಾಡಿನ ಪ್ರತಿಭಾವಂತ ಸಂಗೀತ ವಿದ್ವಾಂಸರಿಗೆ ಪ್ರತಿಭಾ ಪ್ರದರ್ಶನದ ಆಡುಂಬೊಲವಾಗಿತ್ತು. ಅರಮನೆಯ ಒಳಗೂ ಹೊರಗೂ ಅನುರಣನಗೊಳ್ಳುತ್ತಿದ್ದ ಈ ಸಂಗೀತ ಸಂಭ್ರಮ ದಸರೆಗೆ ಪ್ರಭಾವಳಿಯಂತಿತ್ತು. ಈಗಿನ ಪ್ರಜಾಪ್ರಭುತ್ವ ಆಡಳಿತದ ದಿನಗಳಲ್ಲಿ, ದಸರೆಯ ಸ್ವರೂಪ ಬದಲಾಗಿದ್ದರೂ ಸಂಗೀತ ಸಂಭ್ರಮದಲ್ಲಿ ಹೆಚ್ಚಿನ ವ್ಯತ್ಯಾಸವೇನೂ ಆಗಿಲ್ಲ. ಈಗಲೂ ಸಂಗೀತಪ್ರೇಮಿಗಳಿಗೆ ದಸರೆಯೆಂದರೆ ಸಂಗೀತ ಸಮಾರಾಧನೆಯೇ ಸರಿ.

■ ಉಮಾ ಅನಂತ್



# ದಸರೆಯ ಸಂಗೀತ ಸಮಾರಾಧನೆಯ ಅಪೂರ್ವ ನೆನಪುಗಳ ಸಂಕಲನ